**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10015/2019**

**ಚಾಸಾ ಃ 20**

**ಪ್ರಾಸಾ ಃ 08**

| | | |
|---|---|---|
| **ಹೆಸರು** | **ಃ** | **ಪವನ್‌ಕುಮಾರ್** |
| **ತಂದೆಯ ಹೆಸರು** | **ಃ** | **ಗೋವಿಂದರಾಜು** |
| **ವಯಸ್ಸು** | **ಃ** | **28 ವರ್ಷ** |
| **ವೃತ್ತಿ** | **ಃ** | **ಮಗ್ಗದ ಕೆಲಸ** |
| **ವಾಸ** | **ಃ** | **ಕರೇನಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 18.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ನನಗೆ ಚಾಸಾ-2 ಪವನಕುಮಾರ ಅಲಿಯಾಸ ಕೆಟಿ ಗೊತ್ತಿರುವುದಿಲ್ಲ. ಆರೋಪಿ ಆನಂದ ಗೊತ್ತಿರುತ್ತಾನೆ. ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಕಾಲೇಜಿನ ಪಕ್ಕ ನಾನು ಚಿಕನ್ ಅಂಗಡಿ ಇಟ್ಟಿದ್ದೆನು. ಆಗ ಆರೋಪಿಯು ನನ್ನ ಅಂಗಡಿಯಲ್ಲಿ ಚಿಕನ್ ತೆಗೆದುಕೊಳ್ಳಲು ಬರುತ್ತಿದ್ದರು. ದೇವರಾಜ ನಗರದ ದಾಸ ಮತ್ತು ಮಂಜುನಾಥ ಮತ್ತು ಅವರ ತಮ್ಮ ದಾಸ ಅಲಿಯಾಸ ಗಂಗಾಧರ ಗೊತ್ತಿರುವುದಿಲ್ಲ. ದಾಸ ಯಾವ ರೀತಿ ಸತ್ತಿರುತ್ತಾನೆಂದು ನನಗೆ ಗೊತ್ತಿರುವುದಿಲ್ಲ. ಆರೋಪಿಯು ದಾಸನನ್ನು ಹೊಡೆದು ಸಾಯಿಸಿರುತ್ತಾನೆಂದು ನಾನು ಪೋಲೀಸರಲ್ಲಿ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಅಭಿಯೋಜಕರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ :</u>**

3. ದೊಡ್ಡಬಳ್ಳಾಪುರದ ನಗರ ದೇವರಾಜ ನಗರದಲ್ಲಿದ್ದ ಲೋಕೇಶ್ ಅಲಿಯಾಸ ಲೋಕಿ ಮತ್ತು ಅವನ ತಮ್ಮ ಆನಂದ ಅಲಿಯಾಸ ಕಬಾಬ್ ಆನಂದ ಇವರು ನನಗೆ ಮೊದಲಿನಿಂದಲೂ ಸ್ನೇಹಿತರಾಗಿದ್ದೇವು ಎಂದರೆ ಸರಿಯಲ್ಲ. ಸುಮಾರು 5 ವರ್ಷಗಳ ಹಿಂದೆ ನಾನು ಆನಂದ ಅವರ ದೊಡ್ಡಮ್ಮನ ಮಗಳು ಮೋನಿಕಾಳನ್ನು ಪ್ರಿತಿಸಿ ಮದುವೆಯಾಗಿರುತ್ತೇನೆಂದರೆ ಸರಿ. ಸುಮಾರು 2 ವರ್ಷಗಳ ಹಿಂದೆ ದೇವರಾಜ ನಗರದಲ್ಲಿದ್ದ ಮಂಜುನಾಥ ಮತ್ತು ಅವರ ತಮ್ಮ ಗಂಗಾಧರ ಅಲಿಯಾಸ ದಾಸ ಇವರ ಪರಿಯಚವಾಗಿದ್ದು ದಾಸನು ಮಾತನಾಡುವಾಗ ಅವನ ಮೇಲೆ ಚಿತ್ರದುರ್ಗದ ಹಿರಿಯೂರು ಮತ್ತು ಶ್ರೀರಂಗಪಟ್ಟಣದ ಪೋಲೀಸು ಠಾಣೆಯಲ್ಲಿ ಕೇಸುಗಳು ಇರುತ್ತವೆಂದು ಹೇಳಿದ್ದನು ಎಂದರೆ ಸರಿಯಲ್ಲ.

4. 2 ವರ್ಷಗಳ ಹಿಂದೆ ದಾಸನು ಕಚೇರಿ ಪಾಳ್ಯದ ಸುನೀಲನಿಗೆ ಹೊಡೆದಿದ್ದು ಈ ಬಗ್ಗೆ ದೊಡ್ಡಬಳ-ಳಪುರದ ನಗರ ಪೋಲೀಸು ಠಾಣೆಯಲ್ಲಿ ಕೇಸು ಹಾಕಿದ್ದು ಜೈಲಿಗೆ ಹೋಗಿ ಬಂದಿದ್ದನು ಎಂದು ಪೋಲೀಸರಿಗೆ ಹೇಳಿಕೆ ನೀಡಿದ್ದೇನು ಎಂದರೆ ಸರಿ. ಸುಮಾರು 2 ವರ್ಷಗಳ ಹಿಂದೆ ಆನಂದ ಅಲಿಯಾಸ ಕಬಾಬ್ ಆನಂದ ಅವರ ಸ್ನೆಹಿತರೆಲ್ಲರೂ ಹೆದ್ದಾರಿಯಲ್ಲಿ ಕಳ್ಳತನ ಮಾಡಲು ಕಾಯುತ್ತಿದ್ದಾಗ ದೊಡ್ಡಬಳ್ಳಾಪುರದ ಪೋಲೀಸರು ಅವರನ್ನು ಅರೆಸ್ಟ್ ಮಾಡಿದ್ದು ಆನಂದನು ಜೈಲಿಗೆ ಹೋಗಿ ಬಂದಿದ್ದು ಅವನ ವಿರುದ್ಧ ಠಾಣೆಯಲ್ಲಿ ರೌಡಿ ಶೀಟ್ ತೆರೆದಿದ್ದರು ಎಂದರೆ ಸರಿಯಲ್ಲ.

5. ದಿನಾಂಕ: 07.01.2019 ರಂದು ರಾತ್ರಿ ಸುಮಾರು 09.45 ಗಂಟೆಯಲ್ಲಿ ಂದಾಸನು ಕಬಾಬ್ ಆನಂದನ ಹೆಗಲ ವೇಲೆ ಕೈ ಹಾಕಿಕೊಂಡು ನನಗೆ ಮತ್ತು ಲೋಕಿಗೆ ಆನಂದನ ಜೊತೆ ಏನೋ

ಮಾತನಾಡಬೇಕು ಎಂದು ಹೇಳಿ ನಮ್ಮನ್ನು ಕಳುಹಿಸಿದ್ದು ನಂತರ ದಾಸ ಮತ್ತು ಕಬಾಬ್ ಆನಂದ ಇಬ್ಬರೂ ಗಲ್ಲಿ ರಸ್ತೆಯಲ್ಲಿ ಹೋಗಿ ಜಗಳ ಮಾಡಿಕೊಂಡಾಗ ದಾಸನು ಮೊದಲೇ ತನ್ನ ಜರ್ಕೀನ ನಲ್ಲಿ ಇಟ್ಟುಕೊಂಡು ಬಂದಿದ್ದ ಖಾರದ ಪುಡಿ ಪೊಟ್ಟಣ ಕೆಳಗೆ ಬಿದ್ದು ಹೋದಾಗ ದಾಸನು ಜರ್ಕಿನ್ ಒಳಗಡೆ ಇಟ್ಟುಕೊಂಡಿದ್ದ ಮಚ್ಚನ್ನು ತೆಗೆದುಕೊಂಡು ಆನಂದನಿಗೆ ಹೊಡೆಯಲು ಹೋದಾಗ ಅವರಿಬ್ಬರೂ ಮಚ್ಚನ್ನು ಹಿಡಿದುಕೊಂಡು ಎಳೆದಾಡುತ್ತಿದ್ದಾಗ ದಾಸನ ಕೈಯಲ್ಲಿದ್ದ ಮಚ್ಚನ್ನು ಆನಂದ ಕಿತ್ತುಕೊಂಡವನೇ ಏಕಾಏಕಿ ಮಚ್ಚಿನಿಂದ ದಾಸನ ತಲೆಯ ಮೇಲೆ ಹೊಡೆದ ಎಂದು ಬಿಡಿಸಲು ಬಂದ ಚಾಸಾ-2 ಪವನನಿಗೂ ಸಹ ಆನಂದನು ಅದೇ ವಎಚ್ಚಿನಿಂದ ತಲೆಗೆ ಕೈಗೆ ಬಾಯಿಗೆ ಹೊಡೆದು ಖಾರದ ಪುಡಿಯನ್ನು ಎರಚಿ ದಾಸನ ಮುಖ ಮತ್ತು ತಲೆಯ ಮೇಲೆ ಎರಚಿ ಮಚ್ಚಿನಿಂದ ದಾಸನ ಮುಖ, ಕುತ್ತಿಗೆ, ಕೆನ್ನೆ, ಗದ್ದ, ಕೈಗೆ ಹಲವು ಸಲ ಹೊಡೆದು ರಕ್ತಗಾಯಮಾಡಿರುತ್ತಾನೆಂದು ಮತ್ತು ಗಾಯಗೊಂಡಿದ್ದ ಚಾಸಾ-2 ಪವನನು ಸುಧಾರಿಸಿಕೊಂಡು ದಾಸನ ಮನೆಗೆ ಹೋಗಿ ದಾಸನ ಅಣ್ಣ ಮಂಜುನಾಥನಿಗೆ ವಿಚಾರವನ್ನು ತಿಳಿಸಿರುತ್ತಾನೆಂದು, ಆಗ ಮಂಜುನಾಥನು ಅಲ್ಲಿಗೆ ಬಂದು ನೋಡಿ ಗಾಯಗೊಂಡಿದ್ದ ದಾಸನನ್ನು ಮತ್ತು ಪವನನನ್ನು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು ಚಿಕಿತ್ಸೆ ಫಲಕಾರಿಯಾಗದೇ ಅದೇ ದಿನ ರಾತ್ರಿ 11.15 ಗಂಟೆಯಲ್ಲಿ ಸತ್ತು ಹೋಗಿರುತ್ತಾರನೆಂದು ವಿಚಾರ ತಿಳಿದುಬಂದಿರುತ್ತದೆಂದು ನಾನು ಪೋಲೀಸರಲ್ಲಿ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-25 ಎಂದು ಗುರುತಿಸಲಾಯಿತು. ನಾನು ಆರೋಪಿಯ ದೊಡ್ಡಮ್ಮನ ಮಗಳನ್ನು ಮದುವೆಯಾಗಿದ್ದರಿಂದ ಆರೋಪಿಯ ವಿರುದ್ಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಟಿಜಿವಿ ವಕೀಲರವರಿಂದ ಃ</u>**

ಆರೋಪಿಯ ಪರ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ